ದಕ್ಕೆ ಕಾರಣವಾಗುತ್ತದೆ. ಬೆಂಗಳೂರು ನಗರದಲ್ಲಿ ವಾಸ ಮಾಡುವ ಜನರ ಬಗ್ಗೆ ನಾವು ಯೋಚನೆ ಮಾಡಬೇಕು.

ಅಧ್ಯಕ್ಷರು.—ಈಗ ಆರ್. ಎನ್. ನಾಯಕ್‌ರವರು, ಗೈರು ಹಾಜರಿ.

೩. ರಾಜ್ಯದಲ್ಲಿ ಐ.ಪಿ.ಎಸ್. ಮತ್ತು ಐ.ಎ.ಎಸ್. ಅಧಿಕಾರಿಗಳ ನಡುವೆ ಉಂಟಾಗಿರುವ ಘರ್ಷಣೆ

ಶ್ರೀ ಡಿ.ಎ. ಚೆನ್ನಪ್ಪ.—ರಾಜ್ಯದ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ನಡುವಣ ಜಗಳ ಈಗ ಬಯಲಾಗಿದ್ದು ಇತ್ತೀಚೆಗೆ ಸಭೆ ಸೇರಿದ್ದ ಐ.ಪಿ.ಎಸ್. ಅಧಿಕಾರಿಗಳು, ತಮ್ಮ ಬಡ್ತಿ ವಿಚಾರದಲ್ಲಿ ಆ ವರ್ಗಕ್ಕೆ ಸಲ್ಲ ಬೇಕಾದಷ್ಟು ಪ್ರಾಮುಖ್ಯತೆ ಸಲ್ಲದಿರುವುದನ್ನು ಪ್ರಸ್ತಾಪಿಸಿ ಆ ಬಗ್ಗೆ ಸದ್ಯದಲ್ಲೇ ಮುಖ್ಯಮಂತ್ರಿಗಳನ್ನು ಭೇಟಿ ಮಾಡಬೇಕೆಂದು ನಿರ್ಧರಿಸಿರುವುದಾಗಿ ತಿಳಿದು ಬಂದಿದೆ. ಈ ಹಿಂದೆ ಐ.ಪಿ.ಎಸ್. ಅಧಿಕಾರಿಯೊಬ್ಬರನ್ನು ವಿಧಾನಸೌಧದಲ್ಲಿ ವಿಶೇಷಕಾರ್ಯದರ್ಶಿಯನ್ನಾಗಿ ನೇಮಿಸಿದ್ದರು. ಈಗ ಆ ಸ್ಥಾನವನ್ನು ಅಡಿಶನಲ್ ಕಾರ್ಯದರ್ಶಿಯ ದರ್ಜೆಗೆ ಇಳಿಸಲಾಗಿದೆ. ಹೀಗಿದ್ದೂ ಐ.ಪಿ.ಎಸ್. ಅಧಿಕಾರಿ ಐ.ಎ.ಎಸ್. ಅಧಿಕಾರಿಯ ಕೈಕೆಳಗೆ ಕೆಲಸ ಮಾಡಬೇಕಾಗಿದೆ. ಅಲ್ಲದೆ ೧೯೬೨ರಿಂದ ಐ.ಪಿ.ಎಸ್. ಅಧಿಕಾರಿಗಳಿಗೆ ಬಡ್ತಿಸಿಕ್ಕಿಲ್ಲವೆಂದು ತಿಳಿದು ಬಂದಿದೆ. ಆದ್ದರಿಂದ ಈ ಬಗ್ಗೆ ಸರಕಾರದವರು ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ.

SRI M. RAGHUPATHY (Minister for Fisheries and Ports) (On behalf of the Chief Minister).—I would like to make the following statement :

> "There is no conflict between IAS and IPS officers in the State. The post of Special Secretary in Home Department was not in existence earlier. This post was that of an Addl. Secretary for a long time. When Sri N. S. Vasudevan, was working as Additional Secretary and he was promoted, the post was upgraded in January 1984 so as to continue him there. The next incumbent was in the post for a very short time. After his transfer, it was found expedient to operate the post at Addititional Secretary level only. Secondly this post is not earmarked for IPS officers. Any officer of equivalent rank can be posted here. Not only an Additional Secretary but even the Speciel Secretary has to report to the Secretary in a department as per the Transaction of of Business Rule Two officers of 1962 batch are on Central Deputation and one officers working in the State has already been promoted to the grade of I.G. Another 2 officers are to be promoted as and when vacancies arise."

೪. ಬ್ರಹ್ಮಾವರದ ವ್ಯಾಪ್ತಿಗೆ ಒಳಪಟ್ಟ ಕಲ್ಯಾಣಪುರ ಪೆರ್ಡೂರು ಮತ್ತಿತರ ರಸ್ತೆಗಳಿಗೆ ತಾರು ಹಾಕಿಸುವ ಬಗ್ಗೆ

ಶ್ರೀ ಬಸವರಾಜ್ (ಬ್ರಹ್ಮಾವರ).—ನನ್ನ ಮತದಾರ ಕ್ಷೇತ್ರವಾದ ಬ್ರಹ್ಮಾವರದ ವ್ಯಾಪ್ತಿಗೆ ಒಳಪಟ್ಟ ಹೆಚ್ಚಿನ ರಸ್ತೆಗಳು ನಾದುರಸ್ತಿಯಲ್ಲಿವೆ. ಅದರಲ್ಲಿಯೂ ಜಿಲ್ಲಾ ರಸ್ತೆಗಳಾದ (೧) ಕಲ್ಯಾಣಪುರ–ಪೆರ್ಡೂರು ದೊಡ್ಡಂಗಡಿ ರಸ್ತೆ, (೨) ಕೊಕ್ಕರ್ಣೆ–ಸಂತೆಕಟ್ಟೆ ರಸ್ತೆಗಳು ಈವರೆಗೆ ಸಂಪೂರ್ಣ ತಾರಂ

ಆಗಿರುವುದಿಲ್ಲ. ಈ ವಿಷಯವನ್ನು ನಾನು ಕಳೆದ ೩ ಬಾರಿ ಬಜೆಟ್ ಅಧಿವೇಶನಗಳ ಸಮಯದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತಂದಾಗ ೩ ಬಾರಿಯೂ ಸಹ ಈ ರಸ್ತೆಗಳನ್ನು ವಿಶೇಷ ಆದ್ಯತೆಯ ಮೇಲೆ ಈ ವರ್ಷವೇ ತಾರು ಹಾಕಿಸಿ ಕೊಡುವುದಾಗಿ ಭರವಸೆ ನೀಡಿದ್ದರು. ಆದರೆ ಈವರೆಗೆ ತಾರು ಹಾಕಿಸಲಿಲ್ಲ. ಆ ರಸ್ತೆಗಳು ತಾರು ಕಾಣಬಹುದೆಂಬ ನನ್ನ ಆಸೆ ದಿನೇ ದಿನೇ ಕಡಿಮೆಯಾಗುತ್ತಿದೆ. ಆದುದರಿಂದ ಈ ವರ್ಷವೇ ಆ ರಸ್ತೆಗಳ ಉಳಿದ ಭಾಗಗಳಿಗೆ ತಾರನ್ನು ಹಾಕಿಸಿ ಧೂಳನ್ನು ತಿನ್ನುತ್ತಿರುವ ಜನರ ಮನಸ್ಸಿಗೆ ನೆಮ್ಮದಿ ತರಬೇಕೆಂದು ಮಾನ್ಯ ಸಚಿವರನ್ನು ನಿಮ್ಮ ಮೂಲಕ ಒತ್ತಾಯಿಸಂತ್ತೇನೆ.

ಶ್ರೀ ಎಂ ರಘುಪತಿ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಗಮನಕ್ಕೆ ತಂದ ವಿಚಾರವನ್ನು ಲೋಕೋಪಯೋಗಿ ಸಚಿವರಿಗೆ ತಿಳಿಸಿ ಉತ್ತರವನ್ನು ತರಿಸಿಕೊಡುತ್ತೇನೆ.

೫. ಜಮಖಿಂಡಿ ತಾಲ್ಲೂಕಿನ ಚಿಕ್ಕಪಡಸಲಗಿ ವಡ್ಡು ಕಟ್ಟುವ ಕೆಲಸದ ಬಗ್ಗೆ

ಶ್ರೀ ಬಿ, ಎಸ್. ಯಮೂಡಿಯೂರಪ್ಪ.—ಜಿಜಾಪುರ ಜಿಲ್ಲೆ ಜಮಖಿಂಡಿ ತಾಲ್ಲೂಕಿನ ''ಚಿಕ್ಕಪಡಸಲಗಿ'' ಗ್ರಾಮದ ಮತ್ತು ಇತರೆ ಗ್ರಾಮದ ಜೃತರೈತರಿಂದ ೪೦ ಲಕ್ಷ ಸಂಗ್ರಹ ಮಾಡಿ ಮತ್ತು ಬ್ಯಾಂಕಿನಿಂದ ರೈತರು ೨೦ ಲಕ್ಷ ಸಾಲ ಮಾಡಿ ''ಚಿಕ್ಕಪಡಸಲಗಿ ವಡ್ಡು'' ಕಟ್ಟುವ ಕೆಲಸ ಸಂಪೂರ್ಣ ಒಂದು ಕೋಟಿ ಅಂದಾಜಿನಲ್ಲಿ ಸರ್ಕಾರದ ಅನುಮತಿ ಪಡೆದು ಈಗಾಗಲೆ ೨೦ ಲಕ್ಷ ಖರ್ಚು ಮಾಡಿ ಕೆಲಸ ಪ್ರಾರಂಭಿಸಿದ್ದಾರೆ.

ಈ ವಡ್ಡು ಕಟ್ಟುವುದರಿಂದ ಸುತ್ತಮುತ್ತಲ ಅನೇಕ ಗ್ರಾಮಗಳಿಗೆ ಕುಡಿಯುವ ನೀರಿನ ಅನುಕೂಲವಾಗುವುದರಿಂದ—ಸರ್ಕಾರ ಕೊನೆಯ ಪಕ್ಷ ರೈತರ ಪರಿಸ್ಥಿತಿ ಅರಿತುಕೊಂಡು, ಈ ವಡ್ಡಿನ ಕೆಲಸ ಪೂರ್ಣಮಾಡಲು ೨೫ ಲಕ್ಷ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಬೇಕೆಂಬ ವಿಷಯದ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎಂ. ರಘುಪತಿ. - ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಮಂತ್ರಿಯವರಿಂದ ನಾಳೆ ಉತ್ತರವನ್ನು ತರಿಸಿಕೊಡುತ್ತೇನೆ.

೬. ಗುಲ್ಬರ್ಗ ಜಿಲ್ಲೆಯಲ್ಲಿ ನೀರಿನ ಅಭಾವ ಜಾಸ್ತಿಯಾಗುತ್ತಿರುವುದು

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಗುಲ್ಬರ್ಗ ಜಿಲ್ಲೆಯಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಬಿಸಿಲಿನಿಂದ ಅನೇಕ ಗ್ರಾಮಗಳಲ್ಲಿ ನೀರಿನ ಅಭಾವ ಹೆಚ್ಚಾಗುತ್ತಿದ್ದು, ಅಲ್ಲಿಯ ಜಿಲ್ಲಾಪರಿಷತ್ ಇಂಜಿನೀಯರ್‌ಗಳಿಗೆ ಪಿ.ಎಚ್.ಇ. ಕೆಲಸಗಳನ್ನು ವಹಿಸಿಕೊಂಡಿದ್ದು, ನಮ್ಮ ಕ್ಷೇತ್ರದ ಇಂಜಿನೀಯರುಗಳು ಸರಿಯಾಗಿ ಕಾಳಜಿ ವಹಿಸದೆ, ಕೆಲಸಗಳಲ್ಲಿ ವಿಳಂಬ ಮಾಡುತ್ತಿರುವುದರಿಂದ, ಗ್ರಾಮಗಳಲ್ಲಿನ ನೀರಿನ ಪರಿಸ್ಥಿತಿ ಹಾನಿಗುಂಟಾಗಿದೆ. ಈ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿಯವರಿಗೆ ಹಲವಾರು ಬಾರಿ ಮಂಡಲ ಪಂಚಾಯತಿ ಪ್ರಧಾನರು ಮತ್ತು ತಾಲ್ಲೂಕು ಸಮಿತಿಯಿಂದ ಪಿರ್ಯಾದು ಕೊಟ್ಟರೂ, ಇವರಿಗೆ ಯಾರ ಭಯವೂ ಇಲ್ಲ. ತಾವು ಕೂಡಲೇ ಈ ಇಂಜನೀಯರ್‌ಗಳ ಮೇಲೆ ಕ್ರಮ ತೆಗೆದುಕೊಂಡು ಈ ಸಮಸ್ಯೆಗೆ. ಉಡಾಗಿರುವ, ಆತನೂರು, ನೀಲೂರು, ತೆಲ್ಲೂರು, ಸಾಗನೂರು, ಬೈರಾಮದಗಿ, ದೇವಲಗಾಣಗಾಪೂರ್, ಮೇಳಕುಂಡಾ, ಬಿ. ಸಾವಳಗಿ, ರೈಲ್ವೆಸ್ಟೇಶನ್ ಗ್ರಾಮಗಳ ನೀರಿನ ಅನುಕೂಲ ಆದಷ್ಟು ಬೇಗ ಮಾಡಿಸಿಕೊಡಲು ಸರ್ಕಾರ ಕಾಳಜಿ ವಹಿಸಬೇಕಾಗಿ ಈ ಮೂಲಕ ತಿಳಿಯ ಪಡಿಸಂತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ತರಿಸಿ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ೩೫ ಜನ ಮಂತ್ರಿಗಳಿದ್ದಾರೆ ಇಲ್ಲಿ ನಾಲ್ಕು ಜನ ಮಂತ್ರಿಗಳಿದ್ದಾರೆ. ನಾವು ಏನು ಕೇಳಿದರೂ ಕೂಡ ಉತ್ತರ ತರಿಸಿಕೊಡುತ್ತೇನೆಂದು ಹೇಳುತ್ತಾರೆ. ಈ ರೀತಿ ಮಾಡುವುದಾದರೆ ನಾವು ಏಕೆ ಕೇಳಬೇಕು. ನಾವು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬೇಕ. ಸಾಧ್ಯವಾದಷ್ಟು ಅದರ ಬಗ್ಗೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ನಾವು